ಸಂತ ಕವಿ ಕನಕದಾಸರ

# ನಳದಮಯಂತಿ

ಪ್ರೇಮ ಕತೆ



ಡಾ.ಜಿ. ಕೃಷ್ಣಪ್ಪ



## ಇದು ಪತಿವ್ರತಧರ್ಮವಹುದೀ ಸುದತಿ ತೊರೆದಿಹಳೆಲ್ಲವನು

ಇದು ಪತಿವ್ರತ ಧರ್ಮ. ಈ ಚೆಲುವೆ ಎಲ್ಲವನ್ನೂ ತೊರೆದಿದ್ದಾಳೆ. ಈ ರಾಜ ಪತ್ನಿಯನ್ನು ಕಂಡು ಮಾತನಾಡಿಸುವೆಯೆಂದು ಸುದೇವ ಅವಳ ಹತ್ತಿರಕ್ಕೆ ಹೋಗಿ,

'ತಾಯಿಯೇ, ಇದೇಕೆ ಹೀಗೆ ಇರುವಿರಿ? ತಮ್ಮ ಮುಖ ಬಾಡಿದೆ. ಮಲಿನವಾದ ಸೀರೆ ಉಡಲು ಕಾರಣವೇನು?' ಎಂದು ವಿಚಾರಿಸಿ ಮತ್ತೆ ತನ್ನ ವಿವರವನ್ನು ಹೀಗೆ ಹೇಳಿದನು. 'ನಾನು ವಿದರ್ಭ ಪಟ್ಟಣದಿಂದ ಬಂದಿದ್ದೇನೆ. ನಾನು ಬ್ರಾಹ್ಮಣೋತ್ತಮನು. ನನ್ನ ಹೆಸರು ಸುದೇವ. ನಿಮ್ಮ ತಂದೆ ಭೀಮನೃಪನು ನಿಮ್ಮನ್ನು ಹುಡುಕಲು ಕಳುಹಿಸಿದ್ದಾನೆ. ನಾನು ನಿಮ್ಮ ಸಹೋದರನ ಸ್ನೇಹಿತ. ನನ್ನ ಒಂದು ವಿಜ್ಞಾಪನೆಯನ್ನು ಆಲಿಸಿ' ಎಂದು ಕೈ ಮುಗಿದು ವಿನಮ್ರವಾಗಿ ಕೇಳಿಕೊಂಡನು.